**ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ**
**ನಂದಿನಗರ ಅಂಚೆ ಪೆಟ್ಟಿಗೆ ಸಂಖ್ಯೆ: 6 ಬೀದರ –585401 (ಕರ್ನಾಟಕ)**

**ಕುಲಸಚಿವರ ಕಾರ್ಯಾಲಯ**

ದೂರವಾಣಿ : 08482-245241
ಫಾಕ್ಸ್ : 08482-245360
email: regkvafsu@gmail.com

ಸಂಖ್ಯೆ: ಕುಸ/ಶೈವಿ/ಕಪಪಮೀವಿವಿ/2019-20/ ದಿನಾಂಕ:18-04-2019

## ಪ್ರಕಟಣೆ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ ಅಡಿಯಲ್ಲಿ ಬರುವ ಪರೀಕ್ಷಾ ಕೇಂದ್ರಗಳಲ್ಲಿ ಕೃಷಿಕರ ಮಕ್ಕಳಿಗೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರಿಂದ ದಿನಾಂಕ:**18-05-2019** ರಂದು **ಬೆ.9.00** ಗಂಟೆಯ ನಂತರ ನಿಯೋಜಿಸಿದ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಈ ನಿಬಂದನೆಗಳನ್ನು ಪಾಲಿಸುವುದು.

- **ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ** (Code No. 6A) ಪರೀಕ್ಷಾ ಕೇಂದ್ರದಲ್ಲಿ **ಬೀದರ** ಮತ್ತು **ಗುಲಬರ್ಗಾ** ಜಿಲ್ಲೆಯ ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗುವುದು.
- **ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು** (Code No. 6B) ಪರೀಕ್ಷಾ ಕೇಂದ್ರದಲ್ಲಿ **ರಾಮನಗರ** ಮತ್ತು **ತುಮಕೂರು** ಜಿಲ್ಲೆಯ ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗುವುದು.
- **ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು** (Code No. 6C) ಪರೀಕ್ಷಾ ಕೇಂದ್ರದಲ್ಲಿ **ದಕ್ಷಿಣಕನ್ನಡ, ಉಡುಪಿ** ಮತ್ತು **ಕೊಡಗು** ಜಿಲ್ಲೆಯ ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗುವುದು.

ಮುಂದುವರೆದು, ಸಂಬಂಧಿಸಿದ ಅಭ್ಯರ್ಥಿಗಳು ದಿನಾಂಕ:13-05-2019 ರಿಂದ 15-05-2019ರ ಒಳಗಾಗಿ ಈ ಕೆಳಕಂಡ ಕ್ರಮಸಂಖ್ಯೆ-1 ರಿಂದ 6 ವರೆಗಿನ ಅವಶ್ಯ ಮೂಲ ದಾಖಲೆಗಳು ಹಾಗೂ ನಕಲು ಪ್ರತಿಗಳೊಂದಿಗೆ ಮೇಲೆ ತಿಳಿಸಿದ ಆಯಾ ಕೇಂದ್ರದಲ್ಲಿ ಬೆ.9.00 ರಿಂದ ಮಧ್ಯಾಹ್ನ 4.00 ರವರೆಗೆ **ಪರಿಶೀಲನೆ** ಮಾಡಿಸತಕ್ಕದ್ದು.

1. CET ಪರೀಕ್ಷಾ ಪತ್ರ (Hall Ticket)
2. ವ್ಯವಸಾಯಗಾರರ ಪ್ರಮಾಣಪತ್ರ-3, ತಹಶೀಲ್ದಾರರ ಸಹಿ ಹಾಗೂ ಮೊಹರಿನೊಂದಿಗೆ (ಅವಿಭಕ್ತ ಕುಟುಂಬವಾದಲ್ಲಿ ಕಂದಾಯ ಇಲಾಖೆಯಿಂದ ಒದಗಿಸುವ ವಂಶವೃಕ್ಷ ಪ್ರಮಾಣಪತ್ರ)
3. ವೇತನ ದೃಢೀಕರಣ ಪ್ರಮಾಣಪತ್ರ-4 (ಪೋಷಕರು ಸರಕಾರಿ ವೃತ್ತಿಯಲ್ಲಿದ್ದಲ್ಲಿ)
4. ಖಾಸಗಿ ವೃತ್ತಿಯಿಂದ ಆದಾಯ ಪತ್ರ-5 (ಪೋಷಕರು ಖಾಸಗಿ ವೃತ್ತಿಯಲ್ಲಿದ್ದಲ್ಲಿ)
5. ಅಫಿಡೆವಿಟ್ (ಪೋಷಕರು ಸರಕಾರಿ/ಖಾಸಗಿ ವೃತ್ತಿಯಲ್ಲಿದ್ದಲ್ಲಿ)
6. The Comptroller, KVAFSU, Bidar ಇವರ ಹೆಸರಿನಲ್ಲಿ ತೆಗೆದ ಡಿ.ಡಿ. ರೂ.500/- (ಸಾಮಾನ್ಯ & ಓಬಿಸಿ) (ರೂ.250/- ಎಸ್.ಸಿ/ಎಸ್.ಟಿ/ಪ್ರವರ್ಗ-1). ಡಿ.ಡಿಯನ್ನು ದಿ: 10-05-2019 ರಿಂದ 15-05-2019 ರೊಳಗೆ ತೆಗೆದಿರಬೇಕು.

ಅಭ್ಯರ್ಥಿಗಳು ಇವುಗಳನ್ನು ದಿನಾಂಕ:15-05-2019ರ ಒಳಗೆ ಹಾಜರಪಡಿಸಿ, ದಿನಾಂಕ:18-05-2019 ರಂದು ನಡೆಯುವ ಪ್ರಾಯೋಗಿಕ ಪರೀಕ್ಷೆಗೆ ಹಾಲ್ ಟಿಕೆಟ್ ಪಡೆಯಬಹುದಾಗಿದೆ.

**ಸೂಚನೆ:**

- ದಿನಾಂಕ:13-05-2019 ರಿಂದ 15-05-2019 ರ ಒಳಗೆ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳದ ವಿದ್ಯಾರ್ಥಿಗಳಿಗೆ 18-05-2019 ರಂದು ಪ್ರಾಯೋಗಿಕ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.
- ಮೇಲೆ ತಿಳಿಸಿದ ಜಿಲ್ಲೆಗಳನ್ನು ಹೊರತುಪಡಿಸಿ, ಬೇರೆ ಜಿಲ್ಲೆಯ ಅಭ್ಯರ್ಥಿಗಳ ದಾಖಲಾತಿ ಪರಿಶೀಲಿಸಲಾಗುವುದಿಲ್ಲ ಮತ್ತು ಪ್ರಾಯೋಗಿಕ ಪರೀಕ್ಷೆಗೆ ಅವಕಾಶವಿರುವುದಿಲ್ಲ.
- ವಿದ್ಯಾರ್ಥಿಗಳು / ತಂದೆ, ತಾಯಿ / ಪೋಷಕರು ಇವರುಗಳಲ್ಲಿ ಯಾರಾದರೂ ಬಂದು ಮೂಲ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳಬಹುದು.

**ಆದೇಶದ ಮೇರೆಗೆ**
**ಸಹಿ/-**
**(ಪ್ರೊ.(ಡಾ).ಎಚ್.ಆರ್.ವ್ಹಿ.ರೆಡ್ಡಿ)**
**ಕುಲಸಚಿವರು**

*SrPS-Kannada-Corr*